**ಸಾಕ್ಷಿಯನ್ನು ದಿಃ 14.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

**ನಿ.ಪಿ-13** ಅರ್ಜಿದಾರರಿಗೆ ಸಂಬಂಧಿಸಿದ 2 ಕೇಸ್ ಶೀಟು

**ನಿ.ಪಿ-14** ಒಟ್ಟು 7 ಎಕ್ಸ್ ರೇ ಫಿಲಂಗಳು

**ನಿ.ಪಿ-15** ಹೊರರೋಗಿ ದಾಖಲೆ

**ಪಾಟೀ ಸವಾಲು - 2 ನೇ ಎದುರುದಾರರ ಪರ ವಕೀಲರಿಂದ**

ಅರ್ಜಿದಾರರಿಗೆ ಮೊದಲು ಶಸ್ತ್ರಚಿಕಿತ್ಸೆ ನಾನೇ ಮಾಡಿದ್ದೇನೆ. ಬಿಡುಗಡೆಯಾದ ನಂತರ ದಿನಾಂಕ 15.06.2026 ರ ನಡುವೆ ಅರ್ಜಿದಾರರನ್ನು ಅನೇಕ ಭಾರೀ ಪರೀಕ್ಷಿಸಿದ್ದೇನೆ. ಆ ಬಗ್ಗೆ ದಾಖಲೆ ಅರ್ಜಿದಾರರ ಬಳಿ ಇರುತ್ತದೆ. ನಿ.ಪಿ-15 ರಲ್ಲಿ ಬರೆದಿರುವ ದಿನಾಂಕಗಳು ಸರಿಯಿವೆ. ಹೊರರೋಗಿ ಚೀಟಿಗಳು ಅರ್ಜಿದಾರರ ಬಳಿ ಇರುತ್ತವೆ ಎಂದು ಹೇಳುತ್ತಿರುವುದು ಸರಿಯಿಲ್ಲ ಎಂದರೆ ಸರಿಯಲ್ಲ. ಹೊರರೋಗಿ ಚೀಟಿ ಅರ್ಜಿದಾರರ ಬಳಿ ಇರುತ್ತದೆ. X-ray report ಗಳನ್ನು ಹಾಜರುಪಡಿಸಿಲ್ಲ. ಅರ್ಜಿದಾರರಿಗೆ ಮೂಳೆಗಳು ಕೂಡಿಕೊಂಡಿವೆ. ನಾನು ಪ್ರತ್ಯೇಕ ನ್ಯೂನತಾ ದೃಢಪತ್ರ ನೀಡಿಲ್ಲ ಎಂದರೆ ಸರಿ.

ROM ನ್ನು OPD card ನಲ್ಲಿ ನಮೂದಿಸಿರುವುದನ್ನು ಗಮನಿಸಿದ್ದೇನೆ. ನಾನು ನ್ಯೂನತೆಯನ್ನು ಬಲಗಾಲಿಗೆ ಮಾತ್ರ ನೀಡಿದ್ದೇನೆ. ಪೂರ್ತಿ ಶರೀರಕ್ಕಲ್ಲ. ಅರ್ಜಿದಾರರನ್ನು

ನ್ಯೂನತೆ ನಿರ್ಧರಿಸಿಕೊಳ್ಳಲು ವೈದ್ಯಕೀಯ ಮಂಡಳಿಗೆ ನಿರ್ದೇಶಿಸಿಲ್ಲ. ನ್ಯೂನತೆಯನ್ನು ನಿರ್ಧರಿಸುವ formula ವನ್ನು ನಾನು ಹಾಜರುಪಡಿಸಿಲ್ಲ. ಅರ್ಜಿದಾರರಿಗೆ ಯಾವುದೇ ತೊಂದರೆ ಇಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ನ್ಯೂನತೆಯನ್ನು ಉತ್ಪ್ರೇಕ್ಷಣೆಯಿಂದ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ.**

**ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು**
**ಮತ್ತು ಎಂ.ಎ.ಸಿ.ಟಿ., ಮೈಸೂರು.**